**ಪ್ರ. ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ**

**(ಸಂಚಾರಿ ನ್ಯಾಯಾಲಯ ಅಜ್ಜಂಪುರ)**

**ಸಿ.ಸಿ ಸಂಖ್ಯೆ ::719/2014**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಮಂಜುನಾಥ ಎನ್ | **PW**-9 |
| **ತಂದೆಯ ಹೆಸರು** | : | ಆರ್ ನಾಗರಾಜ್ | **CW**-14 |
| **ವಯಸ್ಸು** | : | 47 ವರ್ಷ | |
| **ಉದ್ಯೋಗ** | : | ನಿವೃತ್ತ ಸಿಪಿಐ | |
| **ವಾಸಸ್ಥಳ** | : | ಚಿಕ್ಕಮಗಳೂರು. | |

**(ಸಾಕ್ಷಿಯ ವಿಚಾರಣೆಯನ್ನು ವೀಡಿಯೋ ಕಾನ್ಫರೆನ್ಸ್ ಮುಖಾಂತರ ತೆಗೆದುಕೊಳ್ಳಲಾಯಿತು.)**

**ದಿನಾಂಕಃ30-01-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

ನಾನು 10.03.2014 ರಿಂದ 16.08.2014 ರವರೆಗೂ ಪಂಚನಹಳ್ಳಿ ಪೋಲೀಸ್ ಠಾಣೆಯಲ್ಲಿ, ಸಿ ಪಿ ಐ ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 21.05.2014 ರಂದು ನಾನು ನನ್ನ ಅಧೀನ ಸಿಬ್ಬಂದಿಗಳ ಜೊತೆ ಠಾಣಾ ಗಸ್ತು ಕರ್ತವ್ಯದಲ್ಲಿ ಇದ್ದಾಗ ಸಂಜೆ ಸುಮಾರು 4 ಗಂಟೆ ಸಮಯದಲ್ಲಿ ಬಿ ಹೊಸಹಳ್ಳಿ ಗೇಟ್ ಬಳಿ ಮೂರು ಜನ ವ್ಯಕ್ತಿಗಳು ಅನುಮಾನಾಸ್ಪದವಾಗಿ ಒಂದು ನಂಬರ್ ಪ್ಲೇಟ್ ಇಲ್ಲದ ಬೈಕ್ ಅನ್ನು ನಿಲ್ಲಿಸಿಕೊಂಡು ಇದುದ್ದನ್ನು ನಾವು ಗಮನಿಸಿ ನಾವು ತಕ್ಷಣ ಅವರನ್ನು ವಿಚಾರಿಸಲು ಪ್ರಯತ್ನಿಸಿದಾಗ ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ನೋಡಿ ಅವರು ಓಡಲು ಪ್ರಯತ್ನಿಸಿರುತ್ತಾರೆ. ಆಗ ನಾವು ಅವರನ್ನು ಸುತ್ತುವರಿದು ಹಿಡಿದು ಅವರ ಹೆಸರನ್ನು ಕೇಳಿ

ವಿಚಾರಿಸಲಾಗಿ ಕಲ್ಲೇಶಪ್ಪ, ಪ್ರಶಾಂತ್ ಮತ್ತು ಶಂಕರ್ ಎಂದು ತಿಳಿಸಿರುತ್ತಾರೆ. ಅವರ ಬಳಿ ಇದ್ದ ಒಂದು ಚೀಲವನ್ನು ತೆರೆದು ನೋಡಲಾಗಿ ಅದರಲ್ಲಿ ದೇವಸ್ಥಾನದಲ್ಲಿ ವಿಗ್ರಹಕ್ಕೆ ತೊಡಿಸುವ ಚಿನ್ನ ಮತ್ತು ಬೆಳ್ಳಿಯ ಆಭರಣಗಳಂತೆ ಕಂಡು ಬರುವ ವಸ್ತುಗಳು ಇದ್ದ ಕಾರಣ ಅದರ ಬಗ್ಗೆ ಅವರನ್ನು ವಿಚಾರಿಸಲಾಗಿ ಅವರು ಅದಕ್ಕೆ ಯಾವುದೇ ಸರಿಯಾದ ಉತ್ತರ ನಮಗೆ ನೀಡದ ಕಾರಣ ಸ್ಥಳಕ್ಕೆ ನಾವು ಇಬ್ಬರು ಪಂಚರನ್ನು ಹಾಗೂ ಅಕ್ಕಸಾಲಿಗರನ್ನು ಕರೆಸಿರುತ್ತೇವೆ. ಅವರು ಬಂದ ನಂತರ ಪಂಚರ ಸಮಕ್ಷಮ ಆ ದಿನ ಸಂಜೆ 04.30 ಗಂಟೆಯಿಂದ 06.15 ಗಂಟೆ ಸಮಯದಲ್ಲಿ ಒಂದು ಮಹಜರ್ ಅನ್ನು ತಯಾರಿಸಿ ಅವರ ಬಳಿಯಿಂದ ಒಟ್ಟು 46 ಚಿನ್ನ ಹಾಗೂ ಬೆಳ್ಳಿಯಂತೆ ಕಂಡು ಬರುವ ಆಭರಣಗಳು ಹಾಗೂ ಅವರ ಬಳಿ ಇದ್ದ ನಂಬರ್ ಪ್ಲೇಟ್ ಇಲ್ಲದ ಕೆಂಪು ಬಣ್ಣದ ಬಜಾಜ್ ಪಲ್ಸರ್ ವಾಹನವನ್ನು ಅಮಾನತ್ತುಪಡಿಸಿಕೊಂಡು ಠಾಣೆಗೆ ಕರೆದುಕೊಂಡು ಹೋಗಿ ಸದರಿ ಮಹಜರ್ ಹಾಗೂ ವಶಪಡಿಸಿಕೊಂಡ ವಸ್ತುಗಳ ಆಧಾರದಲ್ಲಿ ಸದರಿ ಆರೋಪಿಗಳ ವಿರುದ್ಧ ನಾನು ಕೆಲಸ ಮಾಡುತ್ತಿದ್ದ ಪಂಚನಹಳ್ಳಿ ಠಾಣಾ ಮೊಕದ್ದಮೆ ಸಂಖ್ಯೆ 49/2014 ರಂತೆ ಆರೋಪಿಗಳ ಮತ್ತು ಅವರು ಸೂಚಿಸಿದ ಇನ್ನು ಇಬ್ಬರ ವಿರುದ್ಧ ಪ್ರ ವ ವರದಿಯನ್ನು ದಾಖಲಸಿರುತ್ತೇವೆ ಮತ್ತು ಆರೋಪಿಗಳು ನೀಡಿದ ಸ್ವ ಇಚ್ಛಾ ಹೇಳಿಕೆಯ ಅಧಾರದಲ್ಲಿ ಆರೋಪಿಗಳಿಂದ ವಶಪಡಿಸಿಕೊಳ್ಳಲಾದ ಆಭರಣಗಳಲ್ಲಿ ಈ ಪ್ರಸ್ತುತ ಪ್ರಕರಣಕ್ಕೆ ಸೇರಿದ 5 ಚಿನ್ನದ ಗುಂಡುಗಳು ಹಾಗೂ 3 ಚಿನ್ನದ ತಾಳಿಗಳು ಮತ್ತು 2 ಬೆಳ್ಳಿಯ ದೇವರ ಕಣ್ಣುಗಳು ಈ ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಿರುತ್ತದೆ ಎನ್ನುವ ವಿಚಾರ ನನ್ನ ತನಿಖೆಯಲ್ಲಿ ಕಂಡು ಬಂದ ಕಾರಣ ನ್ಯಾಯಾಲಯದ ಆದೇಶ ಪಡೆದು ಅವುಗಳನ್ನು ಅಜ್ಜಂಪುರ ಪೊಲೀಸ್ ಠಾಣೆಗೆ ಕಡತ ಹಾಗೂ ಮುದ್ದೆಮಾಲುಗಳನ್ನು ವರ್ಗಾವಣೆ ಮಾಡಿರುತ್ತೇನೆ. ನಂತರದಲ್ಲಿ ದಿಃ 23.05.2014 ರಂದು ಚಾಸಾ1 ರವರನ್ನು ನಮ್ಮ ಠಾಣೆಗೆ ಕರೆಸಿಕೊಂಡು ನಾವು ವಶಪಡಿಸಿಕೊಂಡಿದ್ದ ಆಭರಣಗಳನ್ನು ಅವರ ಮುಖಾಂತರ ಗುರುತಿಸಿದುಕೊಂಡು ಅವರ

ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಪ್ರಕರಣದ ಆರೋಪಿಗಳನ್ನು ಹಾಗೂ ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

ಸಾಕ್ಷಿಯು ನಿಪಿ8 ಮಹಜರ್ ನಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ8 ಬಿ ಎಂದು ಗುರುತಿಸಲಾಯಿತು. ನಿಪಿ6 ಪೋಟೋದಲ್ಲಿ ಇರುವ ಆಭರಣಗಳನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ.

**:: ಪಾಟೀ ಸವಾಲು :: ಆರೋಪಿಗಳ ಪರ ವಕೀಲರಿಂದ ::**

ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-

ಪ್ರ. ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ., ತರೀಕೆರೆ

(ಸಂಚಾರಿ ನ್ಯಾಯಾಲಯ ಅಜ್ಜಂಪುರ)

ಸಾಕ್ಷಿಯ ಸಹಿ::